ಸಮರ್ಥಿಸಿಕೊಂಡರು. ಶೆಟ್ರೆ ಪ್ರಸಾದದ ಲಾಡು ತಿಂತೀರ. ಮರುದಿನ ಅದರ ನಿರ್ವಹಣೆ ಹೇಗೆ ಅಂತ ಕೇಳಬೇಕೆನಿಸಿದರೂ ಕೇಳಲಾಗಲಿಲ್ಲ.

ಮರುದಿನ ಸ್ವಲ್ಪ ಮುಂಚಿತವಾಗೆ ಅಲ್ಲಿ ಬಂದವರು ಕನಕಾದೇವಿ ಬರುತ್ತಿದ್ದಾರೊ ಅಂತ ಎರಡು ಮೂರು ಸಾರಿ ಮೆಟ್ಟಲತ್ತ ನೋಡಿದರು. ಅವರು ಬರುವುದು ಕಂಡು ಮೊಬೈಲ್ ಚಾಲು ಮಾಡಿದರು. 'ನೋಡ್ರೀ ಕನಕಾದೇವಿ, ಹಸಿಕಸದಲ್ಲಿ ಪ್ಲಾಸ್ಟಿಕ್ ಚೀಲದ ಸಹಿತ ಹಾಕ್ತಿದಾರೆ ಇಬ್ರು...' ತೋರಿಸಿದರು. 'ಇಬ್ರೂ ಕಮಿಟಿ ಮೆಂಬರುಗಳೇ, ಇವರಿಗೇನು ಬಂತು?' ಉದ್ಗರಿಸಿದರು ಕನಕಾದೇವಿ.

'ನೋಡ್ರೀ ಏನನ್ಯಾಯ... ಮಗೂನ ನ್ಯಾಪ್ಕಿನ್ನು ಹಸಿ ಕಸದಲ್ಲಿ ಹಾಕ್ತಿದಾಳೆ.'

'ಒಂದ್ನೇ ಮಹಡಿ ಕೆಲಸದವಳು, ಅವಳಿಗೇನಾಗ್ಬೇಕು ಹೇಳಿ?'

'ಡ್ರಮ್ಮೇ ತೆಗೆಸಿಬಿಟ್ರೆ?' ನಕ್ಕರು.

'ಕಮೋಡಲ್ಲಿ ಹಾಕಿ ಫ್ಲಶ್ ಮಾಡತಾರೆ. ಡ್ರೇನೇಜು ಒಂದ್ಸಾರಿ ಕಟ್ಕೊಂಡಿತ್ತು ನೆನಪಿದ್ಯಾ? ನ್ಯಾಪ್ಕಿನ್ನು ಮತ್ತೂ ಏನೇನೋ ರಬ್ಬರು ಸರಕು ಒಂದು ಮೂಟೆನೇ ತೆಗೆದಿದ್ದ ಆವತ್ತು' ಇಬ್ಬರೂ ನಕ್ಕರು. ತಟ್ಟನೆ ದೃಷ್ಟಿಯನ್ನು ಅಲ್ಲಿ ಕೇಂದ್ರೀಕರಿಸಿದರು. ಪ್ರಮೋದ್ ಬರುವುದು ಕಾಣಿಸಿತು. ಹಿಂದೆಯೇ ಮಾರುತಾ ಕೂಡ. ಅಂದರೆ ಒಬ್ಬರಿಗೊಬ್ಬರು ಸಂದೇಶ ಕೊಟ್ಟುಕೊಂಡೆ ಬರತಾರಾ?

'ಏನು ಗಜ್ಜರೀದೆ ಸಿಪ್ಪೆ ತುಂಬಿದ ಹಾಗಿದೆ?' ಕಣ್ಣು ಮಿಟುಕಿಸಿದ.

'ಹಲ್ವಾ ಇವತ್ತು ಮನೇಲಿ' ಹುಬ್ಬು ಕೊಂಕಿಸಿದಳು.

'ಮತ್ತೆ ನಂಗೆಲ್ಲೇ...?'

'ಹೇಗೆ ತರೋದು?'

'ಆಯ್ತು, ನೀ ತಿಂದಿದೀಯ?'

'ಹೂಂ ಮತ್ತೆ.'

'ಅದೇ ನಂಗೂ ಸಾಕಾಗುತ್ತೆ...' ಅಂದ. ಅವಳತ್ತ ಬಂದ. ಮುಖವನ್ನು ಎರಡೂ ಕೈಯಲ್ಲಿ ತೆಗೆದುಕೊಂಡ. ತುಟಿಗೆ ತುಟಿಯಿಟ್ಟು ಹತ್ತು ಸೆಕೆಂಡು ಮುತ್ತಿಟ್ಟುಕೊಂಡರು. ನೋಡುವವರಿಗೆ ಎಷ್ಟೋ ಕಾಲ ಕಳೆದಂತೆ ಭಾಸವಾಯಿತು. ಲಿಫ್ಟಿನಲ್ಲಿ ಇಬ್ಬರೂ ಒಟ್ಟಿಗೆ ಬರುತ್ತಾರೆ ಎಂಬುದು ಮನಸಲ್ಲಿ ಮೂಡಿತು. ಆದರೆ ಎರಡಂತಸ್ತು ಇಳಿಯಲು ಎಷ್ಟು ಸಮಯ ಹಿಡಿಯುತ್ತದೆ ಅನಿಸಿತು. ಮಾತಾಡದೆ ಮುಂದಿನದನ್ನು ನೋಡಿ ಮುಗಿಸಿದರು. ವಾಪಸು ಹೊರಟರು.

'ತಿಂಡಿ ತಿಂದು ನಿಮ್ಮನೆಯವ್ರು ಅಂಗಡಿಗೆ ಹೊರಟುಬಿಡ್ತಾರೆ ಕಾಣುತ್ತೆ. ಮಕ್ಕಳೂ ಹೋಗಿರ್ತಾರೆ. ಕೆಲಸದವಳು ಬೆಳಿಗ್ಗೆನೆ ಮುಗಿಸಿ ಹೋಗ್ತಾಳೆ. ಆಮೇಲೆ ಏನ್ಮಾಡತಿರ್ತೀರ...?' ಶಿವರಾಂ ಕೇಳಿದರು. 'ಹೂಂ... ಹಾಗೇ ಟೀವೀಲೇನೋ ನೋಡೋದು, ಒಂದಿಷ್ಟು ಪತ್ರಿಕೇಲಿ ಕಣ್ಣಾಡಿಸೋದು...'

ಮೊದಲು ಬರುವುದು ಕನಕಾದೇವಿಯ ಫ್ಲ್ಯಾಟು. ಬೀಗ ತೆಗೆದವರು ಏನೋ ನೆನಪಾದಂತೆ ಇತ್ತ ತಿರುಗಿದರು. 'ಸ್ವಲ್ಪ ಕಾಫಿ ಕುಡಿತಿದ್ರೇನೊ' ಕೇಳಿದರು. ಶಿವರಾಂ ಹೆಜ್ಜೆ ತಡೆಯಿತು. 'ಈಗಷ್ಟೆ ಆಗಿದೆ... ಮತ್ತೆ ಈಗ...' ಹಾಗೇ ನಿಂತರು. ಇಬ್ಬರಿಗೂ ಮತ್ತೇನು ಹೇಳುವುದು ತೋಚಲಿಲ್ಲ. ನಕ್ಕಂತೆ ಮಾಡಿ ಶಿವರಾಂ ಮೆಟ್ಟಲಕಡೆ ತಿರುಗಿದರು.

ಮಧ್ಯಾಹ್ನ ಊಟಮಾಡಿ ಅಡ್ಡಾದ ಶಿವರಾಂರ ಕಣ್ಣು ಅದಷ್ಟೆ ಬಾಡತೊಡಗಿತ್ತು. ನೆಲಮಹಡಿಯಲ್ಲಿ ಗಲಾಟೆ ಶುರುವಾಯಿತು. ಅದಾಗೆ ನಿಲ್ಲುತ್ತೆ ಅಂತ ಹಾರೈಸಿ ಏಳಲು